1-30 P.M.

ಶ್ರೀ ಜಿ. ಬಿ. ಶಂಕರರಾವ್.—ಅಂತಹವರು ಯಾರೂ ಇಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ವಿವರಗಳನ್ನು ಕೊಡಬೇಕೆ ?

Mr. SPEAKER.—Order, order.

ಶ್ರೀ ಡಿ. ಮುನಿಚಿನ್ನಪ್ಪ.—ಆ ರೀತಿ ಇದ್ದರೆ ಅಂತಹವರನ್ನು ವರ್ಗಾವಣೆ ಮಾಡುವುದಕ್ಕೆ ಏನು ಕ್ರಮವನ್ನು ತಗೆದುಕೊಳ್ಳುತ್ತೀರಿ ?

ಶ್ರೀ ಜಿ. ಬಿ. ಶಂಕರರಾವ್.—ಈಗಾಗಲೇ ಚೀಫ್ ಇಂಜನಿಯರಿಗೆ ತಿಳಿಸಿದ್ದೇವೆ. ಮೂರು ವರ್ಷಗಳಿಗಿಂತ ಹೆಚ್ಚಿಗೆ ದಿವನ ಇದ್ದವರನ್ನು ವರ್ಗಮಾಡಿ ಎಂದು.

Permits for the Sale of Intoxicants.

*Q.—119. Sri B. BHASKAR SHETTY (Kaup).—

Will the Minister for Finance be pleased to state :—

(*a*) the number of permits granted for the sale of intoxicants on wholesale and retail basis in the State as per new amendments made to the rules under the Prohibition Act ;

(*b*) the various categories of intoxicants for the sale of which permit has been granted ;

(*c*) the conditions imposed on the persons who obtain these intoxicants ;

(*d*) the amount derived by them so far for granting licences or permits for selling these intoxicants ?

A.—Sri RAMAKRISHNA HEGDE (Minister for Finance).—

(*a*) The number of licences granted during 1966-67 are as follows :—

22 Trade and Import licences.
125 retailers licences.

(*b*) 1 Spirits.
2 Wines.
3 Fermented liquors.

(*c*) The conditions of Trade and Import licences are as mentioned in Rules 8, 9, 11, 13 and 18 of the Mysore Liquor Rules, 1965, copies of which have been laid on the Table of the House*

The conditions of retail licences are as mentioned in Rules 28, 29, 30, 32, 35 and 36 of Mysore Liquor Rules, 1965, copies of which have been laid on the Table of the House.

* Copy placed in the Mysore Legislature Library, *Vide* No. 3, dated 22nd November 1966

(SRI RAMAKRISHNA HEGDE)

		Rs.
(*d*) By Trade and Import licences	...	33,000.
By Retail licences	...	3,75,000.

ಶ್ರೀ ರಾಮಕೃಷ್ಣ ಹೆಗಡೆ.—ಉಪ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಮುಂಚೆ ಅಂಕಿ ಅಂಶಗಳಲ್ಲಿ ಸ್ವಲ್ಪ ಬದಲಾವಣೆ ಇದೆ. ಅದು ಹೀಗೆ ಇದೆ. ಟ್ರೇಡ್ ಮತ್ತು ಇಂಪೋರ್ಟ್ ಲೈಸನ್ಸಸ್ ಒಟ್ಟು 43. ರಿಟೈಲರ್ಸ್ ಲೈಸನ್ಸಸ್ ಒಟ್ಟು 217. ಕ್ರಮವಾಗಿ ಅದರಿಂದ ಬಂದ ಉತ್ಪನ್ನ 64,500 ರೂಪಾಯಿಗಳು ಮತ್ತು 6,51,000 ರೂಪಾಯಿಗಳು.

ಶ್ರೀ ಬಿ. ಭಾಸ್ಕರಶೆಟ್ಟಿ.—ಹೋಲ್‌ಸೇಲರ್ಸ್ ಮತ್ತು ರಿಟೇಲರ್ಸ್‌ಗೆ ಪರ್ಮಿಟ್ಟುಗಳಲ್ಲದೆ ಬಾರ್ ಲೈಸನ್ಸುಗಳನ್ನೂ ಸಹ ಕೊಟ್ಟಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ.—ಕುಡಿಯುವ ಪರ್ಮಿಟ್ಟುಗಳನ್ನು ತೆಗೆದುಕೊಳ್ಳುವುದರಲ್ಲಿ ಸಾಧಾರಣವಾಗಿ ಶೇಕಡ 90 ರಷ್ಟು ದಕ್ಷಿಣ ಕನ್ನಡ ಜಿಲ್ಲೆಯ ಮೆಡಿಕಲ್ ಸ್ಟೂಡೆಂಟ್ಸ್ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಲೈಸೆನ್ಸ್‌ಗೆ ಸಂಬಂಧಪಟ್ಟ ಪ್ರಶ್ನೆ. ಪರ್ಮಿಟ್ಟಿಗೆ ಸಂಬಂಧಪಟ್ಟ ಪ್ರಶ್ನೆಯಲ್ಲ. ಅದನ್ನು ಸರ್ವೆ ಮಾಡಬೇಕು.

ಶ್ರೀ ಸಂಜೀವನಾಥ ಐಕಳ.—ಪರ್ಮಿಟ್ ಪಡೆದಿರುವವರ ಪೈಕಿ ಹೆಚ್ಚಾಗಿರುವವರು ಕಾಂಗ್ರೆಸಿನವರು ಅಲ್ಲವೇ ? ಅದರಲ್ಲೂ ಮುಂದೆ ನಡೆಯತಕ್ಕ ಕಾಂಗ್ರೆಸ್ಸಿನ ಜನಾವಣಾ ಫಂಡಿಗೆ ಹಣ ಕೊಟ್ಟಿರುವವರು ಅಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಪಿ.ಎಸ್ ಪಿ. ಅವರಿಗೇ ಆಗಲಿ, ವಿರೋಧಪಕ್ಷಗಳ ಪೈಕಿ ಯಾರೇ ಅರ್ಜಿ ಹಾಕಿದರೂ ಮೆರಿಟ್ ಮೇಲೆ ಅವರಿಗೂ ಲೈಸೆನ್ಸ್ ಕೊಡುತ್ತೇವೆ.

ಶ್ರೀ ಸಿದ್ಧಯ್ಯ ಕಾಶೀಮಠ್.—ಕೆಲವು ಜಿಲ್ಲೆಗಳಿಂದ ಸಾಕಷ್ಟು ಅರ್ಜಿಗಳು ಬಂದಾಗ್ಯೂ ಅವನ್ನು ಪೊಟಕುಮಾಡಿ ಕೇವಲ ಕಲವೇ ಅರ್ಜಿಗಳಿಗೆ ಮಾತ್ರ ಲೈಸೆನ್ಸ್ ಮಂಜೂರು ಮಾಡಿದ್ದೀರಿ; ಅದಕ್ಕೇನು ಕಾರಣ ?

ಶ್ರೀ ರಾಮಕೃಷ್ಣ ಹೆಗಡೆ.—ಯಾವ್ಯಾವ ತಾಲ್ಲೂಕಿಗೆ ಕೊಟ್ಟಿರತಕ್ಕ ಪರ್ಮಿಟ್‌ಗಳ ಸಂಖ್ಯೆಯೆಷ್ಟು ಮತ್ತು ಆಯಾ ತಾಲ್ಲೂಕಿನ ಜನಸಂಖ್ಯೆಯೆಷ್ಟು — ಇವೆರಡರ ಆಧಾರದ ಮೇಲೆ ಎಷ್ಟು ಲೈಸೆನ್ಸ್‌ಗಳನ್ನು ಕೊಡಬೇಕೆಂಬುದನ್ನು ನಿರ್ಧಾರ ಮಾಡುತ್ತೇವೆ. ಆದರೆ ನಿರ್ಧಾರ ಮಾಡಿದ್ದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಅರ್ಜಿಗಳು ಬಂದರೆ ಆಗ ಅವನ್ನೆಲ್ಲಾ ಮಂಜೂರು ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಒಂದು ಲಕ್ಷ ಜನಗಳಿಗೆ ಒಂದು ರಿಟೈಲ್ ಷಾಪ್ ಇರುವುದರಿಂದ ಅದನ್ನು ಸ್ವಲ್ಪಮಟ್ಟಿಗೆ ಲಬರಲೈಸ್ ಮಾಡಲು 50 ಸಾವಿರ ಜನಗಳಿಗೆ ಒಂದರಂತೆ ಏಕೆ ವ್ಯವಸ್ಥೆ ಮಾಡಬಾರದು ?

(ಉತ್ತರವಿಲ್ಲ)

ಶ್ರೀ ಕೆ. ದೇವಯ್ಯ.—ಬೆಂಗಳೂರು ಕಾರ್ಪೋರೇಷನ್ನಿನಲ್ಲಿ ಲೇಬರ್ ಏರಿಯಾ ಶ್ರೀರಾಮಪುರದಲ್ಲಿ ಇರುವುದರಿಂದ ಬಹಳ ತೊಂದರೆಯಾಗುತ್ತಿದೆ. ಅಲ್ಲಿ ಕಾರ್ಪೊರೇಷನ್‌ನವರು ಈ ಬಗ್ಗೆ ಒಂದು ನಿರ್ಣಯಮಾಡಿ ಬಾರ್ ಆಥವಾ ಟಾಡಿ ಷಾಪಿಗೆ ಲೈಸೆನ್ಸು ಕೊಡಬಾರದೆಂದು ಹೇಳಿದ್ದರೂ ಆ ನಿರ್ಣಯವನ್ನ ಉಲ್ಲಂಘಿಸಿ ನೇರ ಕ್ಯಾಸಿನಲ್ಲಿ ಬರಿಗೆ ಲೈಸೆನ್ಸು ಏಕೆ ಕೊಟ್ಟಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಪ್ರೊಹಿಬಿಷನ್ ಜಾರಿಯಲ್ಲಿರುವ ಸ್ಥಳಕ್ಕೆ ಸಂಬಂಧಪಟ್ಟ ಪ್ರಶ್ನೆ ಇದು. ಮಾನ್ಯ ಸದಸ್ಯರು ಕೇಳುವುದು ಸಿಟಿ ಸಪ್ಲೈ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಕೆ. ಲಕ್ಕಪ್ಪ.—1967ನೇ ಮಹಾಚುನಾವಣೆ ಹತ್ತಿರಹತ್ತಿರ ಬರುತ್ತಿರುವಾಗ ಕಾಂಗ್ರೆಸ್ಸಿನವರಿಗೇ ಲೈಸೆನ್ಸ್ ಜಾಸ್ತಿ ಮಾಡುತ್ತಿರುವ ಔಚಿತ್ಯವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಮಾನ್ಯ ಸದಸ್ಯರ ಕಲ್ಪನೆ ಮತ್ತು ಭ್ರಾಂತಿ ಎಂದು ಹೇಳಬಹುದು. ಕಾಂಗ್ರೆಸ್ಸಿನವರಿಗೇ ಕೊಟ್ಟಿದ್ದೇವೆಂದು ಮಾನ್ಯ ಸದಸ್ಯರು ಹೇಳಿದ್ದು ಸುಳ್ಳು. ಡೈರೆಕ್ಟಾಗಿ ದುಡ್ಡು ತೆಗೆದುಕೊಂಡು ಕಲವರಿಗೆ ಕೊಡುತ್ತಿದ್ದಾರೆ ಎಂದು ಹೇಳಿದ್ದು ಸಂಪೂರ್ಣ ಸುಳ್ಳು ಎಂಬುದಾಗಿ ನಾನು ಅಲ್ಲಗೆಳೆಯುತ್ತಿದ್ದೇನೆ.

ಶ್ರೀ ಬಿ. ಭಾನ್ಮರಶೆಟ್ಟಿ.—ಕೋರ್‌ಸೇರ್ ಮತ್ತು ರೀಜ್ಯೂರ್ ಲೈಸೆನ್ಸ್ ಕೊಟ್ಟಿರುವುದು ಜಾಸ್ತಿಯಾಗಿ ಡಿ.ಸಿ.ಸಿ ಮತ್ತು ಎಂ.ಪಿ ಸಿ.ಸಿ. ಸದಸ್ಯರಿಗೇ ಆಗಿದೆ. ಆ ರೀತಿ ಕೊಟ್ಟು ದಾಕಯವರಿಗೆ ನಿರಾಕರಿಸಿದ್ದು ನಿಜವೇ ?

(ಉತ್ತರವಿಲ್ಲ)

Sri K. LAKKAPPA.—Sir, I rise to a point of order. The Hon'ble Minister for Finance, while answering used the word "Sullu". It is unparliamentary and therefore that word may be expunged.

Sri C. J. MUCKANNAPPA.—Sir, he himself has given a Ruling. (*Laughter*)

Minor Irrigation tank work at Nidoni Village.

*Q.—180. Smt. SUSHEELA BAI HIRACHAND SHAH.—

Will the Minister for Public Works be pleased to state :—

(*a*) whether they are aware that a minor irrigation tank has been sanctioned to Nidoni Village in Bijapur Taluk ;

(*b*) if so, why the work of the said tank has not so far been taken up ;

(*c*) whether they intend to take up the work of the tank immediately ?

A.—Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*) Tenders for the work have already been invited and the work is proposed to be taken up shortly.

(*c*) Yes.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ನನ್ನ ಪ್ರಶ್ನೆಗೆ ಉತ್ತರವಾಗಿ ಟೆಂಡರುಗಳನ್ನು ಕರೆದಿದ್ದರೂ ಆದರ ಬಗ್ಗೆ ಸರ್ಕಾರದವರು ಏನು ಮಾಡಿದ್ದಾರೆ?

† ಶ್ರೀ ಅಲೂರು ಹನುಮಂತಪ್ಪ.—ನಾಲ್ಕು ಸಾರಿ ಟೆಂಡರುಗಳನ್ನು ಕರೆದಿದ್ದರೂ ಇದುವರೆಗೆ ಯಾರೂ ಬಂದಿಲ್ಲ. ಕಾಮಗಾರಿ ಸರ್ಕಾರದಲ್ಲಿ ಮಂಜೂರಾಗಿದೆ. ಕೆಲಸ ಜಾಗ್ರತೆಯಾಗಿ ಕಾರ್ಯಗತ ಮಾಡುತ್ತೇವೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಬಿಜಾಪುರದ ಸುತ್ತು ಮುತ್ತಲೂ ಮಳೆ ಕಡಮೆಯಾಗಿದೆ. ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಸುಮಾರು 200 ಬಾವಿಗಳಿಗೆ ನೀರು ಅನುಕೂಲವಾಗುತ್ತದೆ. ತರೀ ಬೆಳೆ ಚೆನ್ನಾಗಿ ಆಗುತ್ತದೆ. ಆದರೆ ಇಂಜನಿಯರು ಆ ಬಗ್ಗೆ ತಡ ಮಾಡುತ್ತಿದ್ದಾರೆ. ದಯವಿಟ್ಟು ಅವರಿಗೆ ತಿಳಿಸುತ್ತೀರಾ ?

ಶ್ರೀ ಅಲೂರು ಹನುಮಂತಪ್ಪ.—67 ನೇ ಜೂನ್ ವೇಳೆಗೆ ಈ ಕೆಲಸ ಮುಗಿಸುತ್ತೇವೆಂದು ಹೇಳಿರತಕ್ಕ ವರದಿ ನನ್ನ ಮುಂದಿದೆ.